# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 43
2. ಸದಸ್ಯರ ಹೆಸರು : ಎಸ್.ವ್ಹಿ ಸಂಕನೂರ (ಪದವೀಧರರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 04-07-2023
4. ಉತ್ತರಿಸುವ ಸಚಿವರು : ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಗದಗ-ಬೆಟಗೇರಿ ನಗರಸಭೆಯ 24x7 ಕುಡಿಯುವ ನೀರಿನ ಯೋಜನೆ 2014 ರಿಂದ ಪ್ರಾರಂಭವಾಗಿದ್ದರೂ ಸಾರ್ವಜನಿಕರಿಗೆ ಸುಮಾರು 12 ರಿಂದ 13 ದಿನಕ್ಕೊಮ್ಮೆ ನೀರು ವಿತರಣೆಯಾಗಿ ಸಮಸ್ಯೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ನೀಡುವುದು) | ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿ (ಎನ್.ಕೆ.ಯು.ಎಸ್.ಐ.ಪಿ) ಗದಗ-ಬೆಟಗೇರಿ ನಗರಕ್ಕೆ ಹಮ್ಮಿಗಿ ಬ್ಯಾರೇಜಿನಿಂದ ಸಗಟು ನೀರು ಸರಬರಾಜು ಮಾಡಲು ಯೋಜನೆಯನ್ನು ರೂಪಿಸಿ 2018 ರಲ್ಲಿ ಯಶಸ್ವಿಯಾಗಿ ಚಾಲನೆಗೊಳಿಸಲಾಯಿತು. ನಂತರ, ಗದಗ-ಬೆಟಗೇರಿ ನಗರಕ್ಕೆ ಈ ಮೂಲದಿಂದ ಪ್ರತಿ ದಿನ 36 ಎಂಎಲ್‌ಡಿ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಇದರಿಂದ ದಿನ ಬಿಟ್ಟು ದಿನ ನಗರದ ನಿವಾಸಿಗಳಿಗೆ 8 ರಿಂದ 10 ಗಂಟೆ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿತ್ತು.<br><br>ಮುಂದುವರೆದಂತೆ, 24x7 ಕುಡಿಯುವ ನೀರಿನ ಯೋಜನೆಯನ್ನು ದಿನಾಂಕ 24/12/2014 ರಂದು ಮೆ॥ ಎಸ್‌ಪಿಎಂಎಲ್ ಇನ್‌ಫ್ರಾ ಲಿ., ಗುರ್‌ಗಾವ್, ನವದೆಹಲಿ ಇವರಿಗೆ ಗುತ್ತಿಗೆ ನೀಡಲಾಗಿದೆ. ಗುತ್ತಿಗೆ ಅವಧಿ 30 ತಿಂಗಳು ಅಂದರೆ, ದಿನಾಂಕ:23/06/2017 ಕ್ಕೆ ಪೂರ್ಣಗೊಳಿಸಬೇಕಾಗಿರುತ್ತದೆ. ಕಾಮಗಾರಿಯು ಪ್ರಗತಿಯಲ್ಲಿದ್ದಾಗ ಹೆಚ್ಚುವರಿ ಪರಿಮಾಣಗಳ ಅವಶ್ಯಕತೆ ಬಂದ ಕಾರಣ ಹಾಗೂ ಗುತ್ತಿಗೆದಾರರ ವಿಳಂಬದಿಂದ ಗುತ್ತಿಗೆ ಅವಧಿಯನ್ನು ದಿನಾಂಕ:30/04/2023 ರೊಳಗೆ ಕಾಮಗಾರಿ ಸಂಪೂರ್ಣಗೊಳಿಸಲು ಅಂತಿಮ ಗಡುವು ನೀಡಲಾಗಿರುತ್ತದೆ. ಆದರೆ, ಗುತ್ತಿಗೆದಾರರು ಡಿಸಂಬರ್ 2022 ರಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಿರುವುದರಿಂದ, ಗುತ್ತಿಗೆಯನ್ನು ಕರಾರಿನ ಪ್ರಕಾರ ರದ್ದುಗೊಳಿಸಲು ನೋಟೀಸು ಜಾರಿಗೊಳಿಸಲಾಗಿದೆ. ಇದುವರೆಗೆ ಗುತ್ತಿಗೆದಾರರು ಸಾಧಿಸಿರುವ ಪ್ರಗತಿ ಈ ಕೆಳಕಂಡಂತಿದೆ: |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | |

| ಕ್ರ. ಸಂ. | ಕಾಮಗಾರಿ ವಿವರ | ಪ್ರಗತಿ | ಬಾಕಿ |
|---|---|---|---|
| 1 | ವಿತರಣಾ ಜಾಲ (ಹೆಚ್‌ಡಿಪಿಇ) | 466.03 ಕಿ.ಮೀ | 2.18 ಕಿ.ಮೀ |
| 2 | ವಿತರಣಾ ಜಾಲ (ಡಿಐ) | 14.62 ಕಿ.ಮೀ | 2.21 ಕಿ.ಮೀ |
| 3 | ಮನೆ ಸಂಪರ್ಕ | 35012 ಸಂಖ್ಯೆ | 5566 ಸಂಖ್ಯೆ |
| 4 | ಮೇಲೆತ್ತರದ ಜಲಸಂಗ್ರಹಗಾರ | 3 ಸಂಖ್ಯೆ | 2 ಸಂಖ್ಯೆ |
| 5 | ಫ್ಲೋ ಮೀಟರ್ಸ್ | 9 ಸಂಖ್ಯೆ | 13 ಸಂಖ್ಯೆ |
| 6 | ವಾಲ್ವ್ ಅಳವಡಿಕೆ | 549 ಸಂಖ್ಯೆ | 639 ಸಂಖ್ಯೆ. |

ಕಾಮಗಾರಿ ಶೇ.89% ರಷ್ಟು ಪ್ರಗತಿ ಸಾಧಿಸಿದೆ. ಕರಾರಿನ ನಿಯಮಾವಳಿಯಂತೆ ಪೂರ್ಣಗೊಳಿಸಿರುವ ವಲಯಗಳ ನಿರ್ವಹಣೆಯನ್ನು ಗುತ್ತಿಗೆದಾರರಿಗೆ ನೀಡಲು ಅವಕಾಶವಿರುತ್ತದೆ. ಅದರಂತೆ, ಗುತ್ತಿಗೆದಾರರಿಗೆ ಜನವರಿ 2019 ರಲ್ಲಿ ನಿರ್ವಹಣೆಗೆ ನೀಡಲಾಗಿತ್ತು. ಇದಲ್ಲದೆ ನಗರಸಭೆಯವರು ಅಪೂರ್ಣಗೊಂಡಿರುವ ವಲಯಗಳ ನಿರ್ವಹಣೆಯನ್ನು ಸಹ ಇದೇ ಗುತ್ತಿಗೆದಾರರಿಗೆ ಪ್ರತ್ಯೇಕ ಉಪಕರಾರು ಮಾಡಿಕೊಂಡು ನಿರ್ವಹಣೆಯನ್ನು ವಹಿಸಿದ್ದರು. ಈ ಗುತ್ತಿಗೆದಾರರು ನಿರ್ವಹಣೆ ವಹಿಸಿಕೊಂಡ ನಂತರ ವೈಫಲ್ಯದಿಂದಾಗಿ ದಿನ ಬಿಟ್ಟು ದಿನ ನೀರು ಪೂರೈಕೆ ಬದಲು 6 ರಿಂದ 8 ದಿನಗಳಿಗೊಮ್ಮೆ ನೀರು ಸರಬರಾಜು ಮಾಡುತ್ತಿದ್ದರು.

ಗುತ್ತಿಗೆದಾರರ ವೈಫಲ್ಯವನ್ನು ಗಮನಿಸಿ ನಗರಸಭೆಯವರು ಕುಡಿಯುವ ನೀರು ಸರಬರಾಜು ವ್ಯವಸ್ಥೆಯ ನಿರ್ವಹಣೆಯನ್ನು ಗುತ್ತಿಗೆದಾರರಿಂದ ದಿನಾಂಕ:11/01/2023 ಹಿಂಪಡೆದು ನಗರಸಭೆ ವತಿಯಿಂದ ನಿರ್ವಹಿಸುತ್ತಿರುತ್ತಾರೆ.

ನಗರಸಭೆಯಿಂದ ನೀರು ಸರಬರಾಜು ನಿರ್ವಹಣೆ ವಹಿಸಿಕೊಂಡ ನಂತರ 6-8 ದಿನಗಳಿಗೊಮ್ಮೆ ನೀರು ಪೂರೈಕೆ ಮಾಡಲು ಕ್ರಮವಹಿಸಲಾಗುತ್ತಿದ್ದು, ಕೆಲವು ವಾರ್ಡುಗಳಲ್ಲಿ ಸಣ್ಣ ಪುಟ್ಟ ದುರಸ್ತಿಯಿಂದಾಗಿ ಮತ್ತು ಸಗಟು ನೀರು ಸರಬರಾಜು ಮುಖ್ಯ ಕೊಳವೆ ಮಾರ್ಗದಲ್ಲಿ ಲೀಕೆಜ್ ಕಂಡು ಬಂದಾಗ ಮತ್ತು ಯಂತ್ರೋಪಕರಣಗಳ ದುರಸ್ತಿ ಅವಧಿಯಲ್ಲಿ ನೀರು ಪೂರೈಕೆ ಅವಧಿಯಲ್ಲಿ ವ್ಯತ್ಯಾಸವಾಗಿರುತ್ತದೆ.

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಆ)</td><td>24x7 ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳ ಪೈಕಿ ಪೂರ್ಣಗೊಂಡ ಹಾಗೂ ಅಪೂರ್ಣಗೊಂಡ ಕಾಮಗಾರಿಗಳೆಷ್ಟು; (ವಿವರ ನೀಡುವುದು)</td><td>ಎನ್.ಕೆ.ಯು.ಎಸ್.ಐ.ಪಿ ಯೋಜನೆಯಡಿ ಗದಗ-ಬೆಟಗೇರಿ ನಗರವನ್ನು ಭೌಗೋಳಿಕ ಅನುಗುಣಕ್ಕೆ ತಕ್ಕಂತೆ 14 ವಲಯಗಳನ್ನಾಗಿ ವಿಂಗಡಿಸಲಾಗಿದೆ. ಅದರಲ್ಲಿ 7 ವಲಯಗಳಲ್ಲಿ ಕಾಮಗಾರಿ ಪೂರ್ಣಗೊಳಿಸಿ ಹೊಸ ಕೊಳವೆ ಮಾರ್ಗದಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಉಳಿದ 7 ವಲಯಗಳಲ್ಲಿ ಕಾಮಗಾರಿಯು ಅಪೂರ್ಣಗೊಂಡಿರುವುದರಿಂದ ಬಾಗಶಃ ಕೊಳವೆ ಮಾರ್ಗದ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಗುತ್ತಿಗೆದಾರರು ಡಿಸಂಬರ್-2022 ರಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಿರುತ್ತಾರೆ. ಕಾಮಗಾರಿಗಳ ವಿವರ ಕೆಳಕಂಡಂತಿದೆ:
<table>
<tr><th>ಕ್ರ. ಸಂ.</th><th>ಕಾಮಗಾರಿ ವಿವರ</th><th>ಪ್ರಗತಿ</th><th>ಬಾಕಿ</th></tr>
<tr><td>1</td><td>ವಿತರಣಾ ಜಾಲ (ಹೆಚ್‌ಡಿಪಿಇ)</td><td>466.03 ಕಿಮಿ</td><td>2.18 ಕಿ.ಮೀ</td></tr>
<tr><td>2</td><td>ವಿತರಣಾ ಜಾಲ (ಡಿಐ)</td><td>14.62 ಕಿಮಿ</td><td>2.21 ಕಿ.ಮೀ</td></tr>
<tr><td>3</td><td>ಮನೆ ಸಂಪರ್ಕ</td><td>35012 ಸಂಖ್ಯೆ</td><td>5566 ಸಂಖ್ಯೆ</td></tr>
<tr><td>4</td><td>ಮೇಲೆತ್ತರದ ಜಲ ಸಂಗ್ರಹಗಾರ</td><td>3 ಸಂಖ್ಯೆ</td><td>2 ಸಂಖ್ಯೆ</td></tr>
<tr><td>5</td><td>ಫ್ಲೋ ಮೀಟರ್ಸ್</td><td>9 ಸಂಖ್ಯೆ</td><td>13 ಸಂಖ್ಯೆ</td></tr>
<tr><td>6</td><td>ವಾಲ್ವ್ ಅಳವಡಿಕೆ</td><td>549 ಸಂಖ್ಯೆ</td><td>639 ಸಂಖ್ಯೆ.</td></tr>
</table></td></tr>
<tr><td>ಇ)</td><td>24x7 ಕುಡಿಯುವ ನೀರಿನ ಯೋಜನೆಯ ಮೂಲಕ ಸಾರ್ವಜನಿಕರಿಗೆ ಸಮರ್ಪಕವಾಗಿ ಕುಡಿಯುವ ನೀರು ವಿತರಣೆ ಮಾಡಲು ಪ್ರತಿನಿತ್ಯ ಕನಿಷ್ಟ 36 MLD ನೀರು ಸರಬರಾಜು ಆಗಬೇಕಿದ್ದು, ಆ ಪ್ರಮಾಣದಲ್ಲಿ ನೀರು ಸರಬರಾಜು ಆಗುತ್ತಿದೆಯೇ; (ಮಾಹಿತಿ ನೀಡುವುದು)</td><td>ಗದಗ-ಬೆಟಗೇರಿ ನಗರಕ್ಕೆ ಹಮ್ಮಿಗಿ ಬ್ಯಾರೇಜಿನಿಂದ ಪ್ರತಿ ನಿತ್ಯ 36 ಎಂಎಲ್‌ಡಿ ನೀರನ್ನು ಪೂರೈಕೆ ಮಾಡಲಾಗುತ್ತಿದೆ. ವಿದ್ಯುತ್ ಸರಬರಾಜುವಿನಲ್ಲಿ ವ್ಯತ್ಯಾಸ ಹಾಗೂ ಇತರೆ ಯಂತ್ರೋಪಕರಣಗಳಲ್ಲಿ ದೋಷ ಉಂಟಾದಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಾಸ ಉಂಟಾಗುತ್ತದೆ.</td></tr>
</table>

| | | |
|---|---|---|
| ಈ) | 24x7 ಕುಡಿಯುವ ನೀರಿನ ಯೋಜನೆಯಡಿ ಪಾಪನಾಶಿ ಗ್ರಾಮದ ಹತ್ತಿರ ಇರುವ ನೀರು ಶುದ್ಧೀಕರಣ ಘಟಕದಿಂದ ಗದಗದವರೆಗೆ ಜೋಡಣೆಯಾಗಿರುವ ಪೈಪ್‌ಲೈನ್‌ಗಳು ಕಳಪೆ ಮಟ್ಟದಿಂದ (PWS) ಕೂಡಿರುವುದರಿಂದ ಗದಗ-ಬೆಟಗೇರಿಗೆ ನೀರು ಸರಬರಾಜುಗೆ ತೊಂದರೆಯಾಗುತ್ತಿರುವುದು ನಿಜವೇ; (ವಿವರ ನೀಡುವುದು) | ಎನ್.ಕೆ.ಯು.ಎಸ್.ಐ.ಪಿ ಯೋಜನೆಯಡಿ ಸಗಟು ನೀರು ಸರಬರಾಜು ಕಾಮಗಾರಿಯಡಿ 2014-15 ರಲ್ಲಿ ಪಾಪನಾಶಿ ಗ್ರಾಮದ ಹತ್ತಿರ ಇರುವ ನೀರು ಶುದ್ಧೀಕರಣ ಘಟಕದಿಂದ ಗದಗದವರೆಗೆ BWSC ಪೈಪ್‌ಲೈನ್ ಅನ್ನು ಅಳವಡಿಸಲಾಗಿರುತ್ತದೆ. ಸದರಿ ಪೈಪ್ ನಲ್ಲಿ ಪದೇ ಪದೇ ಲೀಕೇಜುಗಳು ಕಂಡುಬರುತ್ತಿರುತ್ತದೆ. ಸದರಿ ಪೈಪ್ ಲೈನ್‌ಗೆ ಸಮನಾಂತರವಾಗಿ ಹೊಸದಾಗಿ ಪೈಪ್ ಲೈನ್ ಅಳವಡಿಸಲು ನಗರಸಭೆ ವತಿಯಿಂದ ರೂ.20.28 ಕೋಟಿಗೆ ಪ್ರಸ್ತಾವನೆಯನ್ನು ಪೌರಾಯುಕ್ತರು, ನಗರ ಸಭೆ ಗದಗ-ಬೆಟಗೇರಿ ರವರು ಸಲ್ಲಿಸಿರುವ ಮೇರೆಗೆ ಜಿಲ್ಲಾಧಿಕಾರಿಗಳು ಗದಗ ಜಿಲ್ಲೆ ರವರು ದಿನಾಂಕ:09-06-2023ರಂದು ಸರ್ಕಾರದ ಮಂಜೂರಾತಿ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಪರಿಶೀಲನೆ ಹಂತದಲ್ಲಿರುತ್ತದೆ. ಈ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳಲಾಗುವುದು. |
| ಉ) | ಹಾಗಿದ್ದಲ್ಲಿ, ಸದರಿ ಕಳಪೆ ಪೈಪ್‌ಲೈನ್ ಗಳನ್ನು ಬದಲಿಸಿ ಗುಣಮಟ್ಟ ಎಂಎಸ್ ಪೈಪ್‌ಗಳನ್ನು ಜೋಡಣೆ ಮಾಡುವ ಕಾರ್ಯ ಕೈಗೊಳ್ಳಲಾಗಿದೆಯೇ; ಗದಗ-ಬೆಟಗೇರಿ ನಗರ ಸಭೆಯು ಸರ್ಕಾರಕ್ಕೆ ಹೆಚ್ಚುವರಿಯಾಗಿ 20 ಕೋಟಿ ಅನುದಾನ ಬಿಡುಗಡೆಗೆ ಮನವಿ ಸಲ್ಲಿಸಿರುವುದು ನಿಜವೇ; ಹಾಗಿದ್ದಲ್ಲಿ ಆ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು? | |

ಕಡತ ಸಂಖ್ಯೆ: ನಅಇ 84 ಪಿ.ಆರ್.ಜೆ 2023

(ಬಿ.ಎಸ್.ಸುರೇಶ್)
ನಗರಾಭಿವೃದ್ಧಿ ಹಾಗೂ ನಗರ
ಯೋಜನೆ ಸಚಿವರು